ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ರವರ ನ್ಯಾಯಾಲಯ,
ಚಿಂತಾಮಣಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 99/2023

ಫಿರ್ಯಾದುದಾರರು: ಕೆಂಚಾರ್ಲಹಳ್ಳಿ ಪೋಲಿಸರು, ಚಿಂತಾಮಣಿ.

ವಿರುದ್ಧ

ಆರೋಪಿತರು:

1) ಶ್ರೀನಿವಾಸ ಅಲಿಯಾಸ್ ಸೀನಪ್ಪ.ಕೆ.ಆರ್
ಬಿನ್ ರಾಮಪ್ಪ, 46 ವರ್ಷ,

2) ಕಾರ್ತಿಕ್.ಕೆ.ಎಸ್, ಬಿನ್ ಶ್ರೀನಿವಾಸ ಅಲಿಯಾಸ್
ಸೀನಪ್ಪ.ಕೆ.ಆರ್, 21 ವರ್ಷ

3) ನರಸಮ್ಮ ಕೋಂಶ್ರೀನಿವಾಸ ಅಲಿಯಾಸ್
ಸೀನಪ್ಪ.ಕೆ.ಆರ್, 42 ವರ್ಷ

4) ರಾಮಪ್ಪ ಲೇಟ್ ಸೀತಪ್ಪ, 77 ವರ್ಷ
ಎಲ್ಲಾ ಆರೋಪಿತರ ವಾಸ ಕಟ್ಟಿಗೇನಹಳ್ಳಿ ಗ್ರಾಮ
ಚಿಂತಾಮಣಿ ತಾಲ್ಲೂಕು.

* * * * *

## ದೋಷಾರೋಪಣೆ

ಶ್ರೀ.ಪ್ರಕಾಶ್ ಪಿ.ಎಂ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಚಿಂತಾಮಣಿ, ಆದ ನಾನು ಆರೋಪಿತರಾದ ನಿಮ್ಮಗಳ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

ದಿನಾಂಕ 28.05.2023 ರಂದು ಸಂಜೆ 6.30 ರ ಸಮಯದಲ್ಲಿ ಕೆಂಚಾರ್ಲಹಳ್ಳಿ ಪೊಲೀಸ್ ಠಾಣಾ ಸರಹದ್ದು ಕಟ್ಟಿಗೇನಹಳ್ಳಿ ಗ್ರಾಮದಲ್ಲಿ ಸಾಕ್ಷಿ-1 ರತ್ನಮ್ಮ ರವರು ತನ್ನ ಮನೆಯ ಒಳಗೆ ಕುರಿಗಳನ್ನು ಹೊಡೆದುಕೊಂಡು ಬಂದಿದ್ದು ಸಹಾಯಕ್ಕಾಗಿ ಸಾಕ್ಷಿ-2 ಶಿವಮ್ಮ ರವರನ್ನು ಕರೆದಾಗ ಸಾಕ್ಷಿ-2 ರವರು ಬರುವುದು ತಡವಾಗಿದ್ದರಿಂದ, ಸಾಕ್ಷಿ-1 ರವರು ಸಾಕ್ಷಿ-2 ರವರನ್ನು ಬೈಯುತ್ತಿದ್ದಾಗ, ಆರೋಪಿಗಳಾದ ನೀವುಗಳು ಸಾಕ್ಷಿ-1 ನಿಮಗೆ ಬೈಯ್ಯುತ್ತಿದ್ದಾರೆಂದು ತಿಳಿದು ಸಮಾನ ಇಚ್ಛೆಯಿಂದ ಸಾಕ್ಷಿ-1 ರವರ ಮೇಲೆ ಗಲಾಟೆಗೆ

ಬಂದು ಅವಾಚ್ಯ ಶಬ್ದಗಳಿಂದ ಬೈದಿದ್ದರನ್ವಯ  ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ 34 ಅಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲ್ಕಂಡ ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಸಮಾನ ಇಚ್ಛೆಯಿಂದ ಸಾಕ್ಷಿ-1 ರವರ ಮೇಲೆ  ಗಲಾಟೆ ಮಾಡಿ ಅವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಹಾಗೂ ಒಂದು, ಮೂರು ಮತ್ತು ನಾಲ್ಕನೇ ಆರೋಪಿಗಳಾದ ನೀವುಗಳು ಸಾಕ್ಷಿ-1 ರವರನ್ನು ಹಿಡಿದುಕೊಂಡು ಕೈಗಳಿಂದ ಹೊಡೆದು, 1,3 ಮತ್ತು 4 ನೇ ಆರೋಪಿಗಳಾದ ನೀವು ಸಾಕ್ಷಿ-1 ರವರನ್ನು ಹಿಡಿದುಕೊಂಡು ಕೈಗಳಿಂದ ಹೊಡೆದು, ಕಾಲುಗಳಿಂದ ಒದ್ದು ಕೆಳಗೆ ತಳ್ಳಿ ಹೋರಳಾಡಿಸಿ ಮೂಗೇಟು ಉಂಟುಮಾಡಿದ್ದರನ್ವಯ ಭಾ.ದಂ.ಸಂ. ಕಲಂ.323 ಸಹವಾಚಕ ಕಲಂ 34 ಅಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲ್ಕಂಡ ದಿನ, ಸಮಯ, ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಸಮಾನ ಇಚ್ಛೆಯಿಂದ ಸಾಕ್ಷಿ-1 ರವರ ಮೇಲೆ ಗಲಾಟೆ ಮಾಡಿ, ಆ ಪೈಕಿ ಎರಡನೇ ಆರೋಪಿಯಾದ ನೀವು ಸಾಕ್ಷಿ-1 ರವರ ತಲೆಗೆ ಕಲ್ಲಿನಿಂದ ಹೊಡೆದು ಸಾಧಾರಣಾ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದರನ್ವಯ ಭಾ.ದಂ.ಸಂ. ಕಲಂ.324 ಸಹವಾಚಕ ಕಲಂ 34 ಅಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನ, ಸಮಯ, ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಸಮಾನ ಇಚ್ಛೆಯಿಂದ ಸಾಕ್ಷಿ-1 ರವರನ್ನು ಕುರಿತು ಇನ್ನೊಂದು ಬಾರಿ ಮನೆ ಬಳಿ ಸಾಪಿಸಿದರೆ ನಿನ್ನ ಕಥೆ ಮುಗಿಸುವುದಾಗಿ ಪ್ರಾಣ ಬೆದರಿಕೆ ಹಾಕಿದ್ದರನ್ವಯ ಭಾ.ದಂ.ಸಂ. ಕಲಂ.506 ಸಹವಾಚಕ ಕಲಂ 34 ಅಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

1) ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

2)ಆರೋಪಣೆಯನ್ನು ನೀವು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

ಉತ್ತರಃ

ಮೇಲ್ಕಂಡ ಆರೋಪದ ಬಗ್ಗೆ ವಿಚಾರಣೆಗೆ ನಿಮ್ಮನ್ನು ಗುರಿಪಡಿಸುತ್ತಿದ್ದೇನೆ ಎಂಬುದಾಗಿ ನಿರ್ದೇಶಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ಆರೋಪಿಗಳಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅದು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/-

ದಿನಾಂಕಃ **20.05.2024**

(ಪ್ರಕಾಶ್ ಪಿ.ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಿಂತಾಮಣಿ.